ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No.2267/2021 CW-1 PW-1

| | | |
|---|---|---|
| ಹೆಸರು | : | ವಾಹಿದಾ ಬೇಗಂ |
| ಗಂಡನ ಹೆಸರು | : | ಮಹಮ್ಮದ್ ಸೆಹಬೂಲ್ ರೆಹಮಾನ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 19-08-2023

ದೋಷಾರೋಪಣೆ ಪೂರ್ವ ಸಾಕ್ಷಿಯ ವಿಚಾರಣೆ.

ಮುಖ್ಯ ವಿಚಾರಣೆಃ ದೂರುದಾರರ ಪರ ವಕೀಲರಿಂದ

ಈ ಪ್ರಕರಣವನ್ನು ನಾನು 1 ರಿಂದ 5 ನೇ ಆರೋಪಿತರ ವಿರುದ್ದ ಸಲ್ಲಿಸಿದ್ದೇನೆ. ನನ್ನ ಮದುವೆ 1 ನೇ ಆರೋಪಿಯೊಂದಿಗೆ ದಿಃ 30.06.2013 ರಂದು ಮುನಿರಾಬಾದ್ ಕ್ಯಾಂಪಿನ ನನ್ನ ಅಕ್ಕ, ಬಾವರ ಮನೆಯಲ್ಲಿ ಆಗಿರುತ್ತದೆ. ನನ್ನ ಮದುವೆಯಾದ 2 ವರ್ಷಗಳವರೆಗೆ ನಾನು ಆರೋಪಿತರೊಂದಿಗೆ ಇದ್ದೆ.

ಮದುವೆ ಕಾಲಕ್ಕೆ 6 ತೊಲೆ ಬಂಗಾರ, ರೂ.2 ಲಕ್ಷ ನಗದು ಹಣ ಮತ್ತು ಮನೆ ಬಳಕೆ ಸಾಮಾನುಗಳನ್ನು ಆರೋಪಿತರು ವರದಕ್ಷಿಣೆ ಕೇಳಿದ್ದರಿಂದ ಕೊಟ್ಟಿದ್ದೇವೆ. ನಾನು 1 ನೇ ಆರೋಪಿಯೊಂದಿಗೆ ಕೇವಲ 2 ತಿಂಗಳು ಚೆನ್ನಾಗಿ ಇದ್ದೆ. ಆ ನಂತರ ರೂ.2 ಲಕ್ಷ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು 1 ನೇ ಆರೋಪಿಯು ಹೊಡೆಬಡೆ ಮಾಡುತ್ತಿದ್ದನು. ಈ ವಿಷಯವನ್ನು ನನ್ನ ತಾಯಿ ಮತ್ತು ಮಾವನಿಗೆ ತಿಳಿಸಿದೆನು. ಅವರು ನನ್ನ ಗಂಡನ ಮನೆಗೆ ಬಂದು ಪಂಚಾಯತಿ ಮಾಡಿದರು. ಆ ಪಂಚಾಯತಿಯಲ್ಲಿ ಆರೋಪಿತರಿಗೆ ಬುದ್ದಿವಾದ ಹೇಳಿದರು. ಆನಂತರ ನಾವು 1 ವರ್ಷ ಚೆನ್ನಾಗಿ ಇದ್ದೆವು.

ದಿಃ 26-03-2014 ರಂದು 1 ನೇ ಆರೋಪಿಯು ಪುನಃ ನನಗೆ ರೂ.2 ಲಕ್ಷ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೊಡೆದು ಬಡೆದು ನನಗೆ ಊಟ ಕೊಡದೇ ಉಳಿದ ಆರೋಪಿತರು ಸೇರಿ ಮನೆಯಿಂದ ಹೊರಗೆ ಹಾಕಿದರು. ಆಗ ಆರೋಪಿತರು ರೂ.2 ಲಕ್ಷ ಹಣ

ತೆಗೆದುಕೊಂಡು ಬರಬೇಕು ಇಲ್ಲವಾದರೆ ಮನೆಯಲ್ಲಿ ಬರಬೇಡ ಎಂದು ಹೇಳಿದರು. ಆನಂತರ ನಾನು ನನ್ನ ತವರು ಮನೆಗೆ ಬಂದೆ. 1 ನೇ ಆರೋಪಿಯು ಮುನ್ನಿ ಬೇಗಂ ಎನ್ನುವವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾನೆ ನನ್ನ ತಾಯಿಯ ಮನೆಯಲ್ಲಿ ಒಂದು ವರ್ಷದವರೆಗೆ ಆರೋಪಿತರು ನನ್ನನ್ನು ಕರೆದುಕೊಂಡು ಹೋಗುತ್ತಾರೆ ಎಂದು ಇದ್ದೆ, ಆದರೆ ಅವರು ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ.

ದಿಃ 19-03-2015 ರಂದು ಸಂಜೆ 4-00 ಗಂಟೆ ಸುಮಾರಿಗೆ ನನ್ನ ತಾಯಿಯ ಮನೆಯಲ್ಲಿ ಇದ್ದಾಗ, ಆರೋಪಿರೆಲ್ಲರೂ ಅಲ್ಲಿ ಬಂದು ನನಗೆ ಬಾಯಿಗೆ ಬಂದ ಹಾಗೆ ಬೈಯುವುದು, ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದರೆ, ತಂದಿಲ್ಲ ಎಂದು ಬೈದರು. ಆಗ 1 ನೇ ಆರೋಪಿಯು ನನ್ನನ್ನು ಹೊಡೆಯುತ್ತಿದ್ದ ನಾನು ಚೀರಿಕೊಂಡಾಗ ನನ್ನ ತಾಯಿ ಫಾತಿಮಾ ಬೇಗ ಮತ್ತು ಮಾವ ಇಕ್ಬಾಲ ಹುಸೇನರವರು ಬಂದು ಗಲಾಟೆ ಬಿಡಿಸಿದರು. ನಂತರ ಆರೋಪಿತರು ನನಗೆ ಹಣ ತೆಗೆದುಕೊಂಡು ಬರದಿದ್ದರೆ ಜೀವ ತೆಗೆಯುತ್ತೇವೆ ಎಂದು ಬೆದರಿಕೆ ಹಾಕಿದರು.

ಈ ಬಗ್ಗೆ ನಾನು ಪೋಲೀಸರಿಗೆ ದೂರು ನೀಡಲುಪೋ.ಠಾಣೆಗೆ ಹೋದೆ. ಪೋಲೀಸರು ಇಂದು ಬನ್ನಿ, ನಾಳೆ ಬನ್ನಿ ಎಂದು ಹೇಳಿ ಯಾವುದೇ ಕ್ರಮ ಜರುಗಿಸಲಿಲ್ಲ ಆನಂತರ ನಾನು ನ್ಯಾಯಾಲಯದಲ್ಲಿ ಬಂದು ದೂರು ಸಲ್ಲಿಸಿದ್ದೇನೆ.

ಆದ್ದರಿಂದ ಆರೋಪಿತರನ್ನು ಶಿಕ್ಷೆಗೆ ಗುರಿಪಡಿಸಲು ಕೋರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಆರೋಪಿ ಪರ ವಕೀಲರು ದೋಷಾರೋಪಣೆ ನಂತರ ಪಾಟೀ ಸವಾಲು ಮಾಡುವ ಅವಕಾಶವನ್ನು ಕಾಯ್ದಿರಿಸಬೇಕೆಂದು ಕೋರಿದ್ದರಿಂದ, ಅವರ ಕೋರಿಕೆಯನ್ನು ಪರಿಗಣಿಸಲಾಗಿದೆ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.